# ಸುತ್ತೋಲೆ

ಪ್ರಿಯ ವಿತರಕರೆ ಮತ್ತು ಫ್ರಾಂಚೈಸಿಗಳೆ,
ನಿಮ್ಮೆಲ್ಲರಿಗೆ ಈ ದಿನದ ಶುಭಾಶಯಗಳು!!!

ನೀವೆಲ್ಲ ನಮ್ಮ ಅತ್ಯಮೂಲ್ಯ ಚಾನೆಲ್ ಪಾಲುದಾರರಾಗಿರುವಿರಿ. ನೀವು ಈಗಾಗಲೇ ತಿಳಿದಂತೆ ನಮ್ಮ ಕಂಪನಿಯ ವ್ಯಾಪಾರ ಭಾರತೀಯ ರಿಜರ್ವ್ ಬ್ಯಾಂಕ್ (ಆರ್‌ಬಿಐ)-ನ ನಿಯಂತ್ರಣಕ್ಕೊಳಪಟ್ಟಿದೆ ಹಾಗೂ ಓದಲಾಗುವ ನಿಯಮ ನಿಬಂಧನೆಗಳೊಂದಿಗೆ ದ ಪ್ರಾವಿಜನ್ಸ್ ಆಫ್ ದ ಪೇಮೆಂಟ್‌ಆ್ಯಂಡ್ ಸೆಟ್ಲಮೆಂಟ್ ಸಿಸ್ಟೆಮ್ಸ್ ಆ್ಯಕ್ಟ್ 2007, ಹಾಗೂ ಎಂಟಿ ಮನಿ ಲಾಂಡರಿಂಗ್ (ಎಎಮ್‌ಎಲ್) ಗೈಡಲೈನ್ಸ್, ಕಂಬ್ಯಾಟಿಂಗ್ ಫೈನಾನ್ಸಿಂಗ್ ಆಫ್ ಟೆರರಿಸ್ಟ್(ಸಿಎಫ್‌ಟಿ) ಗೈಡಲೈನ್ಸ್, ನೊ ಯುವರ್ ಕಸ್ಟಮರ್ (ಕೆ.ವೈ.ಸಿ.) ಮಾರ್ಗದರ್ಶಕ ಸೂತ್ರಗಳಡಿಯಲ್ಲಿ ಬಿಡುಗಡೆಗೊಳಿಸಿದ ನಿಯಂತ್ರಣ ಹಾಗೂ ಆರ್‌ಬಿಐ ಮಾರ್ಗದರ್ಶಕ ಸೂತ್ರಗಳನ್ನು ಕಂಪನಿಯ ವ್ಯವಹಾರಗಳಿಗೆ ಅನ್ವಯಿಸುವಂತೆ ಮಾಡಲಾಗಿದೆ. ಆದ್ದರಿಂದ ತಮ್ಮ ವ್ಯಾಪಾರವನ್ನು ಸುಸೂತ್ರವಾಗಿ ನಡೆಸಲು ಮೇಲ್ಕಾಣಿಸಿದ ಕಾಯ್ದೆಗಳ ಪರಿಚ್ಛೇದಗಳನ್ನು ಪಾಲಿಸುವುದು ಕಂಪನಿ ಹಾಗೂ ಅದರ ಚಾನೆಲ್ ಪಾಲುದಾರರ ಜವಾಬ್ದಾರಿಯಾಗಿದೆ. ತಮ್ಮ ವ್ಯಾಪಾರಕ್ಕೆ ನಷ್ಟ ಉಂಟಾಗಬಾರದೆಂಬ ಉದ್ದೇಶದಿಂದ ತನ್ನ ಹಾಗೂ ತನ್ನ ಚಾನಲ್ ಪಾಲುದಾರರ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಕಂಪನಿಯು ಈ ಸುತ್ತೋಲೆಯನ್ನು ಹೊರಡಿಸುತ್ತಿದೆ.

ದೇಶಾದಾದ್ಯಂತ ಆ್ಯಂಟಿ ಟೆರರಿಸ್ಟ್ ಸ್ಕ್ವಾಡ್, ಸೈಬರ್ ಕ್ರೈಮ್ ಸೆಲ್, ಅಪರಾಧಿ ಶಾಖೆ ಹಾಗೂ ವಿವಿಧ ತನಿಖಾ ದಳಗಳು ನಡೆಸುತ್ತಲಿರುವ ಹಲವಾರು ತನಿಖಾ ಪ್ರಕರಣಗಳಿಂದ ಮೋಸಗಾರರು/ಸಮಾಜ ಘಾತಕ ಶಕ್ತಿಗಳು ವಿತರಕರು ಮತ್ತು ಫ್ರಾಂಚೈಸಿಗಳನ್ನು ಮೋಸದ ಲಾಟರಿ ಯೋಜನೆಗಳು/ಹಗರಣಗಳಲ್ಲಿ ಭಾಗವಹಿಸುವಂತೆ ಪುಸಲಾಯಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ.

ಹಲವು ದಿನಗಳ ಹಿಂದೆ ನಮ್ಮ ಗೌರವಾನ್ವಿತ ವಿತರಕರು ಹಾಗೂ ಐಸಿಡಬ್ಲ್ಯೂ-ಗಳು + 92 ಕಂಟ್ರಿ ಕೋಡ್ (ಪಾಕಿಸ್ತಾನ)-ನಿಂದ ಆರಂಭವಾಗುವ ಹಲವಾರು ನಂಬರ್‌ಗಳಿಂದ ಅವರ ಬ್ಯಾಂಕ್ ಖಾತೆಯ ವಿವರಗಳನ್ನು ಕೇಳುವ ಕರೆಗಳನ್ನು ಪಡೆದಿದ್ದಾರೆ. ಹಲವು ವಿತರಕರು ನಿಜವಾಗಿ ತಮ್ಮ ಬ್ಯಾಂಕ್ ವಿವರಗಳನ್ನು ಕೊಟ್ಟಿದ್ದಾರೆ ಅಲ್ಲದೆ ತಮ್ಮ ಬ್ಯಾಂಕ್ ಖಾತೆಯಲ್ಲಿ ದೊಡ್ಡ ಮೊತ್ತದ ಹಣವನ್ನೂ ಠೇವಣಿಯಾಗಿ ಪಡೆದಿದ್ದಾರೆ. ಕರೆ ಮಾಡಿದವರು ನಂತರ ವಿತರಕರಿಗೆ ಕರೆ ಮಾಡಿ ಅವರ ಖಾತೆಯಲ್ಲಿ

ಹಣವನ್ನು ಠೇವಣಿಯಾಗಿರಿಸಿದ್ದಾಗಿ ಮತ್ತು ಹಣ ಠೇವಣಿಯಾಗಿರಿಸಿದ್ದಕ್ಕಾಗಿ ವಿತರಕರು ತಮ್ಮ ಖಾತೆ ಸಂಖ್ಯೆ ಹಾಗೂ ಇಟ್‌ಜ್ಕ್ಯಾಶ್ ಕಾರ್ಡಿನ ಪಾಸ್‌ವರ್ಡ್‌ನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾರೆ.

**• ಕೆಲವು ಸಲ ಒಬ್ಬ ವ್ಯಕ್ತಿ ಕರೆ ಮಾಡಿ ಪರಿಚಯವಿಲ್ಲದ ಇನ್ನೊಬ್ಬ ವ್ಯಕ್ತಿಗೆ (ವಿತರಕನೂ ಅಲ್ಲ ಹಾಗೂ ಐಸಿಡಬ್ಲ್ಯೂ-ನೂ ಅಲ್ಲ) ಆತನ ಬ್ಯಾಂಕ್ ಖಾತೆ ಸಂಖ್ಯೆಯನ್ನು ಕೊಡುವಂತೆ ಕೇಳಿಕೊಳ್ಳುತ್ತಾನೆ ಅಲ್ಲದೆ ಹಲವಾರು ಜನರನ್ನು ಸಂಪರ್ಕಿಸಿ (ಅವರಿಗೆ ಲಾಟರಿ ಸಿಕ್ಕಿದೆ ಪ್ರೊಸೆಸಿಂಗ್ ಫೀ ಗಾಗಿ ಹಣವನ್ನು ಠೇವಣಿಯಾಗಿರಿಸಬೇಕೆಂದು ಅವರಿಗೆ ಕೇಳಿಕೊಳ್ಳುತ್ತಾನೆ) ಪರಿಚಯವಿಲ್ಲದ ವ್ಯಕ್ತಿಯ ಖಾತೆಯಲ್ಲಿ ಹಣ ಬರುವಂತೆ ಮಾಡುತ್ತಾನೆ,**
**• ನಂತರ ಪರಿಚಯವಿಲ್ಲದ ವ್ಯಕ್ತಿಗೆ ಕರೆ ಮಾಡಿ ಆತ ಆ ಹಣವನ್ನು ಹಿಂಪಡೆಯಬೇಕೆಂದು ನಂತರ ಇಟ್‌ಜ್ಕ್ಯಾಶ್ ವಿತರಕರ ಬಳಿಹೋಗಿ ಇಟ್‌ಜ್ಕ್ಯಾಶ್ ಕಾರ್ಡ್ ಖರೀದಿಸಬೇಕೆಂದು ಕೇಳಿಕೊಳ್ಳುತ್ತಾನೆ.**
**• ಕಾರ್ಡನ್ನು ಖರೀದಿಸಿದ ನಂತರ,ಪಾಕಿಸ್ತಾನದಲ್ಲಿರುವ ವ್ಯಕ್ತಿ ಪರಿಚಯವಿಲ್ಲದ ವ್ಯಕ್ತಿಗೆ ಕರೆಮಾಡಿ ಇಟ್‌ಜ್ಕ್ಯಾಶ್ ಕಾರ್ಡಿನ ಖಾತೆ ಸಂಖ್ಯೆ ಮತ್ತು ಪಾಸ್‌ವರ್ಡ್ ಕೊಡಲು ಕೇಳಿಕೊಳ್ಳುತ್ತಾನೆ.**

ಇಂಥ ಜನರು ಭಾರತದ ಬೇರೆ ಬೇರೆ ನಗರಗಳಲ್ಲಿ ಹಲವಾರು ಜನರನ್ನು ವಂಚಿಸುತ್ತಿದ್ದಾರೆ ಹಾಗೂ ಈ ವಿಷಯ ಪೊಲೀಸ್ ಹಾಗೂ ಸಿಬಿಐ-ನವರ ಗಮನಕ್ಕೆ ಬಂದಿದೆ ಮತ್ತು ಅವರು ಇದರ ತನಿಖೆಯನ್ನೂ ಮಾಡುತ್ತಿದ್ದಾರೆ. ನಮ್ಮ ಕೆಲವು ವಿತರಕರನ್ನೂ ಬಂಧಿಸಲಾಗಿದೆ ಮತ್ತು ತಮ್ಮ ಖಾತೆಗಳನ್ನು ಈ ಉದ್ದೇಶಕ್ಕಾಗಿ ಬಳಸಲು ಕೊಟ್ಟು ಇಂಥ ವಂಚನೆಯಲ್ಲಿ ಸಹಭಾಗಿಗಳಾಗಿರುವುದರಿಂದ ಅವರು ಪೊಲಿಸ್ ಲಾಕಪ್‌ನಲ್ಲಿಯೂ ಇದ್ದಾರೆ. ಒಂದು ವೇಳೆ ನಿಮ್ಮಲ್ಲಿ ಯಾರಾದರೂ ತಿಳಿದೋ ಅಥವಾ ತಿಳಿಯದೆಯೋ ಇಂಥ ಬೊಗಸ್ ಲಾಟರಿ ಸ್ಕೀಮ್/ಸ್ಕ್ಯಾಮ್‌ಗಳ ಬಲಿಗೆ ಬಿದ್ದಲ್ಲಿ ಇದು ಎಎಮ್‌ಎಲ್/ ಸಿಎಫ್‌ಟಿ/ ಕೆ.ವೈ.ಸಿ./ ಪಿಎಸ್‌ಎಸ್ ನಿರ್ದೇಶಕ ಸೂತ್ರಗಳು, ನಿಯಂತ್ರಕ,ಕಾನೂನಿನ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗುತ್ತದೆ.

ಆದ್ದರಿಂದ ಐಎಫ್‌ಟಿಎಸ್‌ಪಿಎಲ್ ಈ ಮೂಲಕ ತಾವೆಲ್ಲರೂ ಅಪರಿಚಿತರಿಗೆ ಅಥವಾ ಪರಿಚಯವಿಲ್ಲದವರಿಗೆ ದೂರವಾಣಿಯ ಮೂಲಕ ಕಾರ್ಡ್‌ಗಳನ್ನು ಮಾರಾಟ ಮಾಡುವ ಸಮಯದಲ್ಲಿ ಜಾಗ್ರತೆಯಿಂದಿರಬೇಕು ಹಾಗೂ ಜಾಣತನದಿಂದ ವರ್ತಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ ಹಾಗೂ ರಿಟೇಲರ್ ಅಥವಾ ಐಸಿಡಬ್ಲ್ಯೂಗಳಲ್ಲದವರಿಗೆ ಕಾರ್ಡ್‌ಗಳನ್ನು

ಕೊಡುವಾಗ ನೀವು ಅತ್ಯಂತ ಜಾಗರೂಕತೆಯಿಂದಿರಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೆವೆ. ಯಾವುದೇ ಗ್ರಾಹಕ ದೊಡ್ಡ ಮೊತ್ತದ ಕಾರ್ಡ್ ಬೇಕೆಂದು ಕೇಳಿಕೊಂಡಲ್ಲಿ ಆತನ ಐಡಿ, ವಿಳಾಸದ ಪುರಾವೆ,ಹಾಗೂ ನಿಜವಾದ ಮೊಬೈಲ್ ಸಂಖ್ಯೆಯನ್ನು ಪಡೆದುಕೊಳ್ಳಬೇಕು ಹಾಗೂ ಅದನ್ನು ಕಾಯ್ದುಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ಇದಲ್ಲದೆ ದೂರವಾಣಿಯಲ್ಲಿ ಯಾವುದೇ ಪರಿಚಯವಿಲ್ಲದ ವ್ಯಕ್ತಿಗೆ ಇಟ್ಜ್ ಕ್ಯಾಶ್ ಕಾರ್ಡಿನ ಅಕೌಂಟ್ ನಂಬರ್ ಆಗಲಿ ಅಥವಾ ಪಾಸ್‌ವರ್ಡ್ ಆಗಲಿ ಕೊಡಬಾರದೆಂದು ಕೂಡ ಕೇಳಿಕೊಳ್ಳುತ್ತೇವೆ. ನಿಮಗೆ ಇಟ್ಜ್‌ಕ್ಯಾಶ್ ಕಾರ್ಡಿನ ಹಿಂಬದಿಯಲ್ಲಿ ಮುದ್ರಿಸಲಾಗಿರುವ ಮಾಸ್ಟರ್ ಅಕೌಂಟ್ ನಂಬರನ್ನಾಗಲಿ ಅಥವಾ ಪಾಸ್‌ವರ್ಡ್‌ನ್ನಾಗಲಿ ಸ್ಕ್ರ್ಯಾಚ್ ಮಾಡುವ ಹಕ್ಕಿಲ್ಲ.

ಯಾರೇ ಆಗಲಿ ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಐಎಫ್‌ಟಿಎಸ್‌ಪಿಎಲ್ ಇಂಥ ಮೋಸದ ಸ್ಕೀಮ್/ಸ್ಕ್ಯಾಮ್‌ನಿಂದ ಉದ್ಭವಿಸುವ ಎಲ್ಲ ತರಹದ ಜವಾಬ್ದಾರಿಗಳಿಂದ ಹೊರಗುಳಿಯುತ್ತದೆ ಮತ್ತು ಈ ಮೋಸದ ಸ್ಕೀಮ್‌ನಿಂದ/ಗಳಿಂದ ಉದ್ಭವಿಸುವ ಯಾವುದೇ ಹಕ್ಕು ಅಥವಾ ಶಿಕ್ಷಾರ್ಹ ಅಪರಾಧಗಳಿಗೆ ತಾನು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

ಇಂಥ ಯಾವುದೇ ಮೋಸದ ವ್ಯವಹಾರ/ಗಳಲ್ಲಿ ಸಹಭಾಗಿಯಾದ ಅಥವಾ ತಮ್ಮನ್ನು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ತೊಡಗಿಸಿಕೊಂಡ ವಿತರಕರು ಹಾಗೂ ಫ್ರಾಂಚೈಸಿಗಳ ವಿರುದ್ಧ ಐಎಫ್‌ಟಿಎಸ್‌ಪಿಎಲ್ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳುತ್ತದೆ. ಇತರ ಯಾವುದೇ ಮೋಸದ ಚಟುವಟಿಕೆಯಲ್ಲಿ ನೀವು ತೊಡಗಿರುವುದಾಗಿ ಐಎಫ್‌ಟಿಎಸ್‌ಪಿಎಲ್‌ನ ಗಮನಕ್ಕೆ ಬಂದಲ್ಲಿ ಐಎಫ್‌ಟಿಎಸ್‌ಪಿಎಲ್ ವಿತರಕರಿಂದ ಪಡೆದ ಎಲ್ಲ ಹಣವನ್ನು ಹಿಡಿದಿಟ್ಟುಕೊಳ್ಳುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

ನಿಮಗೆ ಇಂಥ ಯಾವುದೇ ಕರೆಗಳು ಬಂದಲ್ಲಿ ಅಥವಾ ಯಾವುದೇ ಇಂಥ ಘಟನೆಗಳು ನಿಮ್ಮ ಗಮನಕ್ಕೆ ಬಂದಲ್ಲಿ ಐಎಫ್‌ಟಿಎಸ್‌ಪಿಎಲ್‌ನವರ 022-61125757 ಗೆ ಕರೆ ಮಾಡಿ ಅಥವಾ help@itzcash.comಗೆ ಇ-ಮೇಲ್ ಮಾಡಿ ತಿಳಿಸಬೇಕೆಂದು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಯಾವುದೇ ಪರಿಚಯವಿಲ್ಲದ/ಸಂಶಯಾಸ್ಪದ ವ್ಯಕ್ತಿಯೊಂದಿಗೆ ವ್ಯವಹರಿಸಬಾರದೆಂದು ಅಥವಾ ಅಂಥ ಕರೆಗೆ ಪ್ರತಿಕ್ರಿಯೆ ನೀಡಬಾರದೆಂದು ನಿಮ್ಮನ್ನು ಕೇಳಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂಟರ್ಯಾಕ್ಟಿವ್ ಫೈನಾನ್ಸಿಯಲ್ ಆ್ಯಂಡ್ ಟ್ರೆಡಿಂಗ್ ಸರ್ವಿಸಸ್ ಪ್ರೈ.ಲಿಮಿಟೆಡ್,
26/04/2011